ದಿಃ19.04.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ. ಎಸ್.ಎನ್.ಜಿ., ವಕೀಲರಿಂದಃ

1. ಚಾಸಾ.1, 2, 5, 10, 12 ಮತ್ತು 13 ನನ್ನ ಸಂಬಂಧಿಕರು ಎನ್ನುವುದು ಸರಿ.

2. ಆರೋಪಿತನ ಜಮೀನಿನ ಪಕ್ಕದಲ್ಲಿ ಬೋರಯ್ಯನ ಹೆಸರಿನಲ್ಲಿ ಒಂದು ಸೈಟು ಮಂಜೂರಾಗಿತ್ತು.

3. ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ.

4. ಸದರಿ ಸೈಟಿಗೂ ಮತ್ತು ನಮ್ಮ ಗ್ರಾಮಕ್ಕೂ 2 ಕಿಮೀಗಳ ಅಂತರವಿರುತ್ತದೆ ಎನ್ನುವುದು ಸರಿ.

5. ಭೂಸ್ವಾಧೀನವಾದ 1 ಎಕರೆ 6 ಗುಂಟೆ ಜಮೀನಿನಲ್ಲಿ ಯಾರೂ ವಾಸ ಮಾಡುತ್ತಿಲ್ಲ ಎನ್ನುವುದು ಸರಿಯಲ್ಲ.

6. ಆರೋಪಿತರ ತಾಯಿಯ ಹೆಸರಿನಲ್ಲಿ ಸರ್ವೆ ನಂಬರ್ 56/1 ರಲ್ಲಿನ 1 ಎಕರೆ 18 ಗುಂಟೆ ಜಮೀನು ಇರುತ್ತದೆ ಎನ್ನುವುದು ಸರಿ.

7. ಸದರಿ ಜಮೀನಿನಲ್ಲಿ ಆರೋಪಿತರೇ ವ್ಯವಸಾಯ ಮಾಡುತ್ತಿರುತ್ತಾರೆ ಎನ್ನುವುದು ಸರಿ.

8. ಸದರಿ ಆರೋಪಿತರ ಜಮೀನಿನಲ್ಲಿ ಚಾಸಾ.1, ಗೌರಮ್ಮ, ಮಂಗಳಮ್ಮ, ಮತ್ತು ಚನ್ನಮ್ಮ ಇವರು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ, ಅಳತೆ ಮಾಡಿದ ನಂತರ ಅವರ ಮನೆಗಳು ಅದರಲ್ಲಿ ಬಂದಿರುತ್ತವೆ ಎಂದು ಹೇಳುತ್ತೇನೆ.

9. ವಿವಾದಿತ ಘಟನೆಯ ಸಮಯದಲ್ಲಿ ನಾನು ಅಲ್ಲಿ ಇರಲಿಲ್ಲ ಎಂದರೆ, ನಂತರದಲ್ಲಿ ಬಂದಿರುತ್ತೇನೆ ಎಂದು ಹೇಳುತ್ತೇನೆ.

10. ನನ್ನ ಸಮಕ್ಷಮದಲ್ಲಿ ಚಾಸಾ.1 ಇವಳಿಗೆ ಆರೋಪಿತರು ಬೈದಿರುವುದಿಲ್ಲ ಮತ್ತು ಜಾತಿ ನಿಂದನೆ ಮಾಡಿರುವುದಿಲ್ಲ ಮತ್ತು ಪ್ರಾಣದ ಬೆದರಿಕೆ ಹಾಕಿರುವುದಿಲ್ಲ ಎನ್ನುವುದು ಸರಿ.

11. ಚಾಸಾ.1 ನನ್ನ ಸಂಬಂಧಿಕಳಾಗಿರುವುದರಿಂದ, ಅವಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.